# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 60 ಜಿಪಸ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:13-03-2021

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ
## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 124 ಮತ್ತು 163ಗಳನ್ನು ಪ್ರಕರಣ 311 ರೊಡನೆ ಓದಿಕೊಂಡಂತೆ, ಪ್ರಕರಣ 311ರ ಉಪಪ್ರಕರಣ (1)ರಡಿ ಕರ್ನಾಟಕ ಸರ್ಕಾರವು ಕರಡು ನಿಯಮಗಳನ್ನು ದಿನಾಂಕ:17-02-2021 ರಂದು ಆಕ್ಷೇಪಣೆಗಳನ್ನು ಸಲ್ಲಿಸಲು ಹದಿನೈದು ದಿನಗಳ ಕಾಲಾವಕಾಶಗಳನ್ನು ನೀಡಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವುದರಿಂದ,

ದಿನಾಂಕ:04-03-2021 ರಂದು ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುವುದರಿಂದ, ಈ ಅವಧಿಯಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ನಿಯಮಾನುಸಾರ ಪರಿಗಣಿಸುವುದರಿಂದ,

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ;

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:** (1)ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 2021 ಎಂದು ಕರೆಯಲಾಗುವುದು.

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-** ಈ ನಿಯಮಗಳಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿರದ ಹೊರತು:-

(ಎ) **'ಅಧಿನಿಯಮ'** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಎಂದು ಕರೆಯುವುದು.

(ಬಿ) **"ಜನಗಣತಿಯ ಸಂಖ್ಯೆಗಳು"** ಎಂದರೆ ಜನಗಣತಿ ಅಧಿನಿಯಮ 1948ರ (ಕೇಂದ್ರ ಅಧಿನಿಯಮ 1948ರ 37) ಉಪಬಂಧಗಳನ್ವಯ ಭಾರತದ ಮಹಾ ನೋಂದಣಾಧಿಕಾರಿಗಳು ಹಾಗೂ ಜನಗಣತಿಯ ಆಯುಕ್ತರ ಕಛೇರಿಯಿಂದ ಪ್ರಕಟವಾದ ಕಳೆದ ಹಿಂದಿನ ಜನಗಣತಿ ವರದಿ.

(ಸಿ) **"ಆಯೋಗ"** ಎಂದರೆ ಅಧಿನಿಯಮದ ಪ್ರಕರಣ 308ರಡಿಯಲ್ಲಿನ ರಾಜ್ಯ ಚುನಾವಣಾ ಆಯೋಗ.

(ಡಿ) **"ಕ್ಷೇತ್ರ ವಿಂಗಡಣೆ"** ಎಂದರೆ ಜನಗಣತಿ ಅಂಕಿ-ಅಂಶಗಳನ್ನು ಆಧರಿಸಿ ಕ್ಷೇತ್ರಗಳ ಗಡಿಗಳ ಮರುಹೊಂದಾಣಿಕೆ ಮತ್ತು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸ್ಥಾನಗಳ ಮರು ಹೊಂದಾಣಿಕೆ ಅಥವಾ ನಿಗದಿಪಡಿಸುವಿಕೆ ಎಂದು ಅರ್ಥೈಸುವುದು.

(ಇ) **"ಅಡ್ಡ ಮೀಸಲಾತಿ"** ಮೀಸಲಿರಿಸಿದ ಸ್ಥಾನಗಳನ್ನು ಒಳಗೊಂಡಂತೆ ಪ್ರತಿಯೊಂದು ವರ್ಗದಲ್ಲಿಯೂ ಮಹಿಳೆಯರಿಗೆ ಮೀಸಲಿರಸಬೇಕಾದ ಸ್ಥಾನಗಳು.

(ಎಫ್) **"ಸ್ಥಾನಗಳು"** ಅಂದರೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಸ್ಥಾನಗಳು.

(ಜಿ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಇತರೆ ಪದಗಳು ಮತ್ತು ಪದಜೋಡಣೆಗಳಿಗೆ, ಆದರೆ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ ಅನುಕ್ರಮವಾಗಿ ಅರ್ಥವನ್ನು ಹೊಂದಿರತಕ್ಕದ್ದು.

**3. ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ಆವರ್ತನೆಯ ಮೇಲೆ ಸ್ಥಾನಗಳ ಮೀಸಲಿಡುವಿಕೆ,-** (1) ತಾಲ್ಲೂಕು ಪಂಚಾಯತಿಯಲ್ಲಿ ಪ್ರತಿಯಯೊಂದು ಪ್ರವರ್ಗಗಳಿಗೆ ಮೀಸಲಿಡಲಾದ ಹಾಗೂ ಮೀಸಲಿರಿಸದ ಸ್ಥಾನಗಳನ್ನು ಹಾಗೂ ಮೀಸಲಿರಿಸಲಾದ ಹಾಗೂ ಮೀಸಲಿರಿಸಿದ ಪ್ರವರ್ಗಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಅಧಿನಿಯಮದ ಪ್ರಕರಣ 123ರಂತೆ ಮತ್ತು ಸಂವಿಧಾನ ಪರಿಚ್ಛೇದ 243D ರಂತೆ ನಿರ್ಧರಿಸತಕ್ಕದ್ದು;

(2) ಈ ನಿಯಮಗಳ ಉಪನಿಯಮ (3) ರಲ್ಲಿ ನಿರ್ದಿಷ್ಟಪಡಿಸಿದ ಮೀಸಲು ಕ್ರಮದಂತೆ ಪ್ರತಿ ತಾಲ್ಲೂಕು ಪಂಚಾಯತಿ ಪ್ರದೇಶದ ಕ್ಷೇತ್ರಗಳಲ್ಲಿ ಸ್ಥಾನಗಳ

ಮೀಸಲಾತಿಯನ್ನು ಆವರ್ತನೆಯ ಮೇಲೆ ನಿಗದಿತ ಅನುಕ್ರಮದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮಾಡತಕ್ಕದ್ದು;

(3) ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ಈ ಕೆಳಗಿನ ವಿಷಯಗಳನ್ನು ಪರಿಗಣನೆಗೆ ತಗೆದುಕೊಂಡು ಸ್ಥಾನಗಳ ಮೀಸಲಾತಿಯನ್ನು ಮಾಡತಕ್ಕದ್ದು, ಅವುಗಳೆಂದರೆ:-

(ಎ) ಸಂವಿಧಾನದ (73 ರ ತಿದ್ದುಪಡಿ) ಅಧಿನಿಯಮ 1992ರ ನಂತರ ನಡೆದ ಸಾರ್ವಜನಿಕ ಚುನಾವಣೆಯಿಂದ ಪ್ರಾರಂಭಿಸಿ ಹಿಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿನ ಮೀಸಲಾತಿಯನ್ನು ಪರಿಗಣಿಸಿ ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರದಲ್ಲಿ ಮುಂದಿನ ಚುನಾವಣೆಗೆ ಆವರ್ತನೆಯ ಮೇಲೆ ಪ್ರವರ್ಗಗಳ ಮೀಸಲಾತಿಯನ್ನು ನಿರ್ಧರಿಸತಕ್ಕದ್ದು;

(ಬಿ) ಆದ್ದರಿಂದ, ರಾಜ್ಯ ಚುನಾವಣಾ ಆಯೋಗವು ತಾಲ್ಲೂಕಿನ ಜನಸಂಖ್ಯೆಯಲ್ಲಿ ಶೇಕಡಾವಾರು ಅತೀ ಹೆಚ್ಚು ಅನುಸೂಚಿಯ ಪಂಗಂಡಗಳ ಜನಸಂಖ್ಯೆ ಇರುವ ಮತ ಕ್ಷೇತ್ರಗಳನ್ನು ಅವರೋಹಣ ಕ್ರಮದಲ್ಲಿ ಪಟ್ಟಿ ಮಾಡತಕ್ಕದ್ದು;

(ಸಿ) ರಾಜ್ಯ ಚುನಾವಣಾ ಆಯೋಗವು ತಾಲ್ಲೂಕಿನ ಜನಸಂಖ್ಯೆಯಲ್ಲಿ ಶೇಕಡಾವಾರು ಅತೀ ಹೆಚ್ಚು ಅನುಸೂಚಿತ ಜಾತಿ ಜನಸಂಖ್ಯೆ ಇರುವ ಮತ ಕ್ಷೇತ್ರಗಳನ್ನು ಅವರೋಹಣ ಕ್ರಮದಲ್ಲಿ ಪಟ್ಟಿಮಾಡತಕ್ಕದ್ದು;

(ಡಿ) ಆಯೋಗವು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸಿದ ಸ್ಥಾನಗಳನ್ನು ತಾಲ್ಲೂಕಿನ ಜನಸಂಖ್ಯೆಯಲ್ಲಿ ಅನುಸೂಚಿತ ಪಂಗಡಗಳ ಜನಸಂಖ್ಯೆಯ ಶೇಕಡಾವಾರು ಅತಿ ಹೆಚ್ಚು ಇರುವಂತಹ ಮತಕ್ಷೇತ್ರಗಳ ಆವರ್ತನೆಯ ಮೇಲೆ ನಿರ್ಧರಿಸತಕ್ಕದ್ದು, ಆದಾಗ್ಯೂ ಈಗಾಗಲೇ ಸದರಿ ಮತ ಕ್ಷೇತ್ರಕ್ಕೆ ಈ ಹಿಂದೆ ಅನುಸೂಚಿತ ಪಂಗಡ ಸ್ಥಾನ ಹಂಚಿಕೆಯಾಗಿದ್ದಲ್ಲಿ, ಅದೇ ಮೀಸಲಾತಿಯು ಪುನರಾವರ್ತನೆಯಾಗುತ್ತಿಲ್ಲವೆನ್ನುವುದನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಅನುಸೂಚಿತ ಪಂಗಡದ ಮೀಸಲಾತಿಯ ಶೇಕಡಾವಾರು ಹೆಚ್ಚಿನ ಅನುಸೂಚಿತ ಪಂಗಡಗಳ ಜನಸಂಖ್ಯೆಯಿರುವ ನಂತರದ ಸ್ಥಾನಕ್ಕೆ ಮೇಲಿನ ಉಪನಿಯಮ (1) ರ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು ನಿಗದಿಗೊಳಿಸತಕ್ಕದ್ದು;

(ಇ) ಆಯೋಗವು ಅನುಸೂಚಿತ ಪಂಗಂಡದಿಂದ ಮಹಿಳೆಯರಿಗೆ ಸ್ಥಾನಗಳ ಮೀಸಲಾತಿ ಹಂಚಿಕೆ (ಅಡ್ಡ ಮೀಸಲಾತಿ) ಮಾಡುವಾಗ, ಅನುಸೂಚಿತ ಪಂಗಡದ ಸ್ಥಾನವನ್ನು ಹಂಚಿಕೆ ಮಾಡಲು ಅರ್ಹವಾಗಿರುವ ಮತಕ್ಷೇತ್ರಗಳ ಪೈಕಿ ಅತಿ ಹೆಚ್ಚಿನ ಅನುಸೂಚಿತ ಪಂಗಂಡಗಳ ಮಹಿಳಾ ಜನಸಂಖ್ಯೆಯಿರುವ ಮಕ್ಷೇತ್ರಕ್ಕೆ ಹಂಚಿಕೆ ಮಾಡತಕ್ಕದ್ದು;

(ಎಫ್) ಆಯೋಗವು ಅನುಸೂಚಿತ ಜಾತಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದ ಸ್ಥಾನಗಳನ್ನು ತಾಲ್ಲೂಕಿನ ಜನಸಂಖ್ಯೆಯಲ್ಲಿ ಶೇಕಡಾವಾರು ಅನುಸೂಚಿತ ಜಾತಿಯ ಜನಸಂಖ್ಯೆಯು ಅತೀ ಹೆಚ್ಚು ಇರುವಂತಹ ಮತಕ್ಷೇತ್ರಗಳಿಗೆ ಆವರ್ತನೆಯ ಮೇಲೆ ನಿರ್ಧರಿಸತಕ್ಕದ್ದು, ಆದಾಗ್ಯೂ , ಈಗಾಗಲೇ ಸದರಿ ಮತಕ್ಷೇತ್ರಕ್ಕೆ ಈ ಹಿಂದೆ ಅನುಸೂಚಿತ ಜಾತಿ ಸ್ಥಾನ ಹಂಚಿಕೆಯಾದಲ್ಲಿ ಅದೇ ಮೀಸಲಾತಿಯು ಪನರಾವರ್ತನೆಯಾಗುತ್ತಿಲ್ಲವೆನ್ನುವುದನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಅನುಸೂಚಿತ ಜಾತಿಯ ಮೀಸಲಾತಿಯು ಶೇಕಡಾವಾರು ಹೆಚ್ಚಿನ ಅನುಸೂಚಿತ ಜಾತಿಯ ಜನಸಂಖ್ಯೆಯಿರುವ ನಂತರದ ಸ್ಥಾನಕ್ಕೆ ಮೇಲಿನ ಉಪನಿಯಮ (1)ರ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು ನಿದಗಿಗೊಳಿಸತಕ್ಕದ್ದು;

(ಜಿ) ಆಯೋಗವು ಅನುಸೂಚಿತ ಜಾತಿಯ ಮಹಿಳೆಯರ ಮೀಸಲಾತಿ ಸ್ಥಾನಗಳಿಗೆ ಹಂಚಿಕೆ (ಅಡ್ಡ ಮೀಸಲಾತಿ) ಮಾಡುವಾಗ ಅನುಸೂಚಿತ ಜಾತಿಯ ಸ್ಥಾನವನ್ನು ಹಂಚಿಕೆ ಮಾಡಲು ಅರ್ಹವಾಗಿರುವ ಮತಕ್ಷೇತ್ರಗಳ ಪೈಕಿ ಅತೀ ಹೆಚ್ಚಿನ ಅನುಸೂಚಿತ ಜಾತಿ ಮಹಿಳಾ ಜನಸಂಖ್ಯೆಯಿರುವ ಮತಕ್ಷೇತ್ರಕ್ಕೆ ಹಂಚಿಕೆ ಮಾಡತಕ್ಕದ್ದು;

(ಎಚ್) ತಾಲ್ಲೂಕು ಪಂಚಾಯತಿಯಲ್ಲಿ ಅನುಸೂಚಿತ ಪಂಗಡ ಮತ್ತು ಅನುಸೂಚಿತ ಜಾತಿ ಮೀಸಲಾತಿಯನ್ನು ನಿಗದಿಪಡಿಸಿದ ಸಂದರ್ಭದಲ್ಲಿ ಅಂತಹ ಮೀಸಲಾತಿಯನ್ನು ಶೇಕಡಾ ಐವತ್ತು ತಲುಪಿದಲ್ಲಿ ಅಥವಾ ಅದಕ್ಕಿಂತ ಹೆಚ್ಚಾದಲ್ಲಿ, ಅಂತಹ ಆಯೋಗವು ತಾಲ್ಲೂಕು ಪಂಚಾಯತಿಯಲ್ಲಿ ಹಿಂದುಳಿದ ವರ್ಗಗಳಿಗೆ ಯಾವುದೇ ಮೀಸಲಾತಿಯನ್ನು ಹಂಚಿಕೆ ಮಾಡತಕ್ಕದ್ದಲ್ಲ, ಮತ್ತು

(ಐ) ಈ ಮೇಲೆ ತಿಳಿಸಲಾದ ಉಪನಿಮಯ(ಎಚ್) ರ ಉಪಬಂಧಗಳಿಗೊಳಪಟ್ಟು ಆಯೋಗದಿಂದ ತಾಲ್ಲೂಕು ಪಂಚಾಯತಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಕಾರ್ಯಸಾಧ್ಯವಾಗುವ ಮಟ್ಟಿಗೆ ಆವರ್ತನೆಯ ಮೇಲೆ ಹಂಚಿಕೆ ಮಾಡತಕ್ಕದ್ದು;

ಪರಂತು, ಹಿಂದಿನ ಅವಧಿಯಲ್ಲಿ ಒಂದು ಮತಕ್ಷೇತ್ರಕ್ಕೆ ಹಿಂದುಳಿದ ವರ್ಗ-ಎ ಅಥವಾ ಹಿಂದುಳಿದ ವರ್ಗ-ಬಿಎಂದು ಮೀಸಲಾತಿ ಹಂಚಿಕೆ ಮಾಡಿದ್ದಲ್ಲಿ, ಅದೇ ಉಪ-ಪ್ರವರ್ಗದ ಮೀಸಲಾತಿಯನ್ನು ಪುನರಾವರ್ತಿಸತಕ್ಕದ್ದಲ್ಲ;

(ಜೆ) ಆಯೋಗವು ಯಥಾಸಾದ್ಯವಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಹಿಂದುಳಿದ ವರ್ಗಗಳಲ್ಲಿ ಮಹಿಳೆಯರಿಗೆ ಮೀಸಲಾದ ಸ್ಥಾನಗಳನ್ನು ಆವರ್ತನೆಯ ಮೇಲೆ ಹಂಚಿಕೆ ಮಾಡತಕ್ಕದ್ದು;

(ಕೆ) ಮೇಲೆ ಹೇಳಲಾದ ಹಂತಗಳನ್ನು ಪೂರ್ಣಗೊಳಿಸಿದ ನಂತರ, ಮೀಸಲಿಸಿರಿದ ಸ್ಥಾನಗಳಿಂದ (ಸಾಮಾನ್ಯ) ಮಹಿಳೆಯರಿಗೆ ಸ್ಥಾನವನ್ನು ಮೀಸಲಿಡುವಾಗ, ಮತಕ್ಷೇತ್ರದ ಒಟ್ಟು ಜನಸಂಖ್ಯೆಯಲ್ಲಿ ಅತ್ಯಂತ ಹೆಚ್ಚಿನ ಮಹಿಳಾ ಜನಸಂಖ್ಯೆ ಹೊಂದಿರುವ ಮತಕ್ಷೇತ್ರಕ್ಕೆ, ಆಯೋಗವು ಹಂಚಿಕೆ ಮಾಡತಕ್ಕದ್ದು ಅಥವಾ ಕಾಯ್ದಿರಿಸತಕ್ಕದ್ದು;

ಪರಂತು, ಸಾದ್ಯವಾದಷ್ಟು ಹತ್ತಿರದಲ್ಲಿ ಪುನರಾವರ್ತನೆಯಾಗತಕ್ಕದ್ದಲ್ಲ;

(ಎಲ್ ) ಪ್ರತಿಯೊಂದು ಪ್ರವರ್ಗದಲ್ಲಿ ಮಹಿಳೆಯರಿಗೆ ಮೀಸಲಿಡಲಾದ ಸ್ಥಾನಗಳು ಮತ್ತು ಮೀಸಲಿರಿಸದ ಸ್ಥಾನಗಳ (ಸಾಮಾನ್ಯ) ಪೈಕಿ ಮಹಿಳೆಯರಿಗೆ ಮೀಸಲಿಡಲಾದ ಸ್ಥಾನಗಳು ಸಾಧ್ಯವಾದಷ್ಟು ಮಟ್ಟಿಗೆ ಪುನರಾವರ್ತನೆಯಾಗತಕ್ಕದ್ದಲ್ಲ ಮತ್ತು ಮೀಸಲಿರಿಸಲಾದ ಹಾಗೂ ಮೀಸಲಿರಿಸಿದ ಸ್ತಾನಗಳ ಪೈಕಿ ಮಹಿಳೆಯರಿಗಾಗಿ ಇರುವಂತಹ ಮೀಸಲಾತಿಯು ಸಂಬಂಧಪಟ್ಟ ಪ್ರವರ್ಗ ಅಥವಾ ಮೀಸಲಿರಿಸಿದ ಸ್ಥಾನಗಳ ಪೈಕಿ ಅತ್ಯಂತ ಹೆಚ್ಚಿನ ಮಹಿಳಾ ಜನಸಂಖ್ಯೆಯನ್ನು ಹೊಂದಿರುವ ನಂತರದ ಮತಕ್ಷೇತ್ರಕ್ಕೆ ಪ್ರವಹಿಸತಕ್ಕದ್ದು;

**4. ಜಿಲ್ಲಾ ಪಂಚಾಯತಿಗಳಲ್ಲಿ ಆವರ್ತನೆಯ ಮೇಲೆ ಮೀಸಲಾತಿ.-** (1) ಪ್ರತಿ ಜಿಲ್ಲಾ ಪಂಚಾಯತಿಯಲ್ಲಿ ಸ್ಥಾನಗಳ ಸಂಖ್ಯೆಯನ್ನು ಪ್ರತಿ ಮೀಸಲಿರಿಸಿದ ಮತ್ತು ಮೀಸಲಿರಿಸದ ಪ್ರವರ್ಗಗಳ ಸ್ಥಾನಗಳು; ಮೀಸಲಿರಿಸಿದ ಮತ್ತು ಮೀಸಲಿರಿಸದ ಸ್ಥಾನಗಳಲ್ಲಿ ಮಹಿಳೆಯರಿಗೆ ಸ್ಥಾನಗಳ ನಿರ್ಧಾರಣವನ್ನು ಅಧಿನಿಯಮದ ಪ್ರಕರಣ 161, 162 ಮತ್ತು 163ರ ಉಪ-ಬಂಧಗಳನ್ವಯ ನಿರ್ಧರಿಸತಕ್ಕದ್ದು;

ರಾಜ್ಯ ಚುನಾವಣಾ ಆಯೋಗವು ಜಿಲ್ಲಾ ಪಂಚಾಯತಿಯಲ್ಲಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದ ಸ್ಥಾನಗಳ ಪೈಕಿ ಅನುಸೂಚಿತ ಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ತಾಲ್ಲೂಕುಗಳಿಗೆ ಆಧ್ಯತೆಯನ್ನು ನೀಡಿ ಜಿಲ್ಲೆಯಲ್ಲಿರುವ ತಾಲ್ಲೂಕುಗಳಿಗೆ ಒಂದೊಂದು ಸ್ಥಾನವನ್ನು ಆವರ್ತನೆಯ ಮೂಲಕ ಹಂಚಿಕೆ ಮಾಡತಕ್ಕದ್ದು;

ಪರಂತು, ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು ಜಿಲ್ಲೆಯಲ್ಲಿನ ತಾಲ್ಲೂಕುಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿದ್ದರೆ, ಈ ಖಂಡದ ಅಡಿಯಲ್ಲಿ ಹಂಚಿಕೆ ಮಾಡಿದ ತರುವಾಯ ಉಳಿದ ಸ್ಥಾನಗಳನ್ನು ಅನುಸೂಚಿತ ಪಂಗಡಗಳ ಜನಸಂಖ್ಯೆ ಹೆಚ್ಚು ಇರುವ ತಾಲ್ಲೂಲುಗಳಿಗೆ ಆದ್ಯತೆ ನೀಡಿ ಆ ತಾಲ್ಲೂಕುಗಳಿಗೆ ಮತ್ತು ಹಂಚಿಕೆ ಮಾಡತಕ್ಕದ್ದು.

ಅನುಸೂಚಿತ ಜಾತಿಗಳಿಗೆ ಮೀಸಲಾದ ಸ್ಥಾನಗಳನ್ನು ಮೇಲಿನ ಉಪಬಂಧಗಳಲ್ಲಿ ಅನುಸೂಚಿತ ಪಂಗಡಗಳಿಗೆ ಸ್ಥಾನಗಳನ್ನು ಮೀಸಲಿರಿಸಿದ ರೀತಿಯಲ್ಲಿಯೇ ಆವರ್ತನೆಯ ಮೇರೆಗೆ ಹಂಚಿಕೆ ಮಾಡತಕ್ಕದ್ದು;

(2) ಆಯೋಗವು, ಜಿಲ್ಲಾ ಪಂಚಾಯತಿಯಲ್ಲಿನ ಆವರ್ತನೆಯ ಮೀಸಲಾತಿ ಮತ್ತು ಇರತೆ ವಿಷಯಗಳಿಗೆ ನಿಯಮ 3ರ ಉಪಬಂಧಗಳನ್ನು ಯಥೋಚಿತವಾಗಿ ಅನುಸರಿಸತಕ್ಕದ್ದು;

**5. ನಗರ ಸಂಸ್ಥೆಗಳೊಂದಿಗೆ ವಿಲೀನವಾಗುವುದರಿಂದ ಮತ್ತು ತಾಲ್ಲೂಕು ಮತ್ತು ಜಿಲ್ಲೆಗಳಲ ವಿಭಜನೆಯಿಂದಾಗಿ ಹಾಗೂ ಕ್ಷೇತ್ರಗಳ ಮರುವಿಂಗಡನೆಯಿಂದ ಮೀಸಲಾತಿಯ ಮೇಲೆ ಪರಿಣಾಮ ಬೀರುವ ಅಂಶಗಳು:-** ಈ ನಿಯಮಗಳು ಪ್ರಾರಂಭಗೊಂಡ ನಂತರ ಯಾವುದೇ ಕ್ಷೇತ್ರ ವಿಂಗಡನೆಯಲ್ಲಿ,-

(ಎ) ಮತಕ್ಷೇತ್ರದ ಪ್ರದೇಶವು, ಈ ಮೊದಲ ಮತಕ್ಷೇತ್ರದ ಹಚ್ಚಿನ ಪ್ರದೇಶವನ್ನು ಹೊಂದಿದಲ್ಲಿ, ಈ ನಿಯಮಗಳಡಿ ಆವರ್ತನೆಯಯನ್ನು ಮಾಡುವ ಸಲುವಾಗಿ ಅದನ್ನು ಈ ಹಿಂದಿನ ಮತಕ್ಷೇತ್ರದ ಅನುಕ್ರಮ ಮತ ಕ್ಷೇತ್ರವೆಂದು ಪರಿಗಣಿಸತಕ್ಕದ್ದು;

(ಬಿ) ಮತಕ್ಷೇತ್ರ ಅಥವಾ ಮತಕ್ಷೇತ್ರಗಳಿಂದ ರಚಿಸಲಾದ ಒಂದು ಮತಕ್ಷೇತ್ರವನ್ನು, ಹಿಂದಿನ ಮತಕ್ಷೇತ್ರದ ಸಣ್ಣ ಪ್ರದೇಶ ಅಥವಾ ಮತಕ್ಷೇತ್ರಗಳ ಸಣ್ಣ ಪ್ರದೇಶದ ವಿಲೀನಗಳೊಂದಿಗೆ ರಚಿತವಾಗಿತ್ತದೊ ಆ ಮತಕ್ಷೇತ್ರ ಹೊಸ ಮತಕ್ಷೇತ್ರವಾಗಿರತಕ್ಕದ್ದು. ಈ ಮತಕ್ಷೇತ್ರಕ್ಕೆ ಮೇಲಿನ ನಿಯಮ (3) ರಡಿಯಲ್ಲಿ ಮೀಸಲಾತಿಯನ್ನು ಹೊಸದಾಗಿ ಪ್ರಾರಂಭಿಸತಕ್ಕದ್ದು;

(ಸಿ) ಮತ್ತೊಂದು ಮತಕ್ಷೇತ್ರ ಅಥವಾ ಮತಕ್ಷೇತ್ರಗಳ ಪ್ರದೇಶವನ್ನು ಸೇರಿಸುವ ಮೂಲಕ ವಿಸ್ತರಿಸಲಾದ ಮತಕ್ಷೇತ್ರದಲ್ಲಿ ಈ ರೀತಿ ಸೇರ್ಪಡೆಗೊಳ್ಳುವ ಹಿಂದಿನ ಕ್ಷೇತ್ರದ ಆವರ್ತನೆಯ ಮೀಸಲನ್ನು ಮುಂದುವರೆಸತಕ್ಕದ್ದು; ಮತ್ತು

(ಡಿ) ಎರಡು ಅಥವಾ ಹೆಚ್ಚಿನ ಮತಕ್ಷೇತ್ರಗಳ ವಿಲೀನದಿಂದ ರಚಿಸಲಾದ ಮತಕ್ಷೇತ್ರಕ್ಕೆ, ಈ ಪೈಕಿ ದೊಡ್ಡ ಮತಕ್ಷೇತ್ರದ ಮೀಸಲನ್ನು ಮುಂದುವರೆಸತಕ್ಕದ್ದು;

**6. ಕ್ಷೇತ್ರಗಳ ಮೀಸಲಾತಿ ಅಧಿಸೂಚನೆ.-** (1) ಆಯೋಗವು ನಿಯಮ 3ರನ್ವಯ ಸಿದ್ದಪಡಿಸಲಾದ ಅಂತಿಮ ಪಟ್ಟಿ ಆಧಾರದ ಮೇಲೆ ಮತಕ್ಷೇತ್ರಗಳ ಮೀಸಲಾತಿಯ ಕರಡು ಅಧಿಸೂಚನೆಯನ್ನು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಏಳು ದಿನಗಳ ಕಾಲಾವಕಾಶವನ್ನು ನೀಡಿ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು;

(2)ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಆಯೋಗವು ಪರಿಗಣಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಒಪ್ಪಲು ಅಥವಾ ತಿರಸ್ಕರಿಸಲು ಸೂಕ್ತ ನಿರ್ಣಯಗಳನ್ನು ಕೈಗೊಳ್ಳತಕ್ಕದ್ದು.

(3) ತದನಂತರ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಮತಕ್ಷೇತ್ರಗಳ ಮೀಸಲಾತಿಯ ಅಂತಿಮ ಅಧಿಸೂಚನೆಯನ್ನು ಪ್ರಕಟಿಸತಕ್ಕದ್ದು.

**7. ಆಯೋಗದ ಅಧಿಕಾರ.-** ಈ ನಿಯಮಗಳಲ್ಲಿ ಯಾವುದಾದರೂ ಅವಶ್ಯ ಅಂಶಗಳು ಒಳಗೊಂಡಿರದಿದ್ದರೆ, ಈ ನಿಯಮಗಳು ಮತ್ತು ಸಂವಿಧಾನದ (73 ನೇ ತಿದ್ದುಪಡಿ) ಅಧಿನಿಯಮ, 1992ರನುಸಾರ ಆಯೋಗವು ರೂಪಿಸುವುದು.

**8. ನಿರಸನ ಮತ್ತು ಉಳಿಸುವಿಕೆ.-** ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 1998 ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಅಂತಹ ನಿರಸನವು,-

(ಎ) ನಿರಸಿತವಾದ ನಿಯಮಗಳ ಹಿಂದಿನ ಕಾರ್ಯಾಚರಣೆ ಅಥವಾ ನಿರಸಿತವಾಗುವುದಕ್ಕಿಂತ ಮೊದಲು ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ; ಅಥವಾ

(ಬಿ) ನಿರಸಿತವಾದ ನಿಯಮಗಳಡಿಯಲ್ಲಿ ಗಳಿಸಿದ, ಪ್ರಾಪ್ತವಾದ, ವಹಿಸಲಾದ, ಯಾವುದೇ ಹಕ್ಕು ಹೊಣೆಗಾರಿಕೆ ಅಥವಾ ಬಾಧ್ಯತೆಯ ಮೇಲೆ;

ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ. ನವೀನ್ ಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ, (ಜಿ.ಪಂ.) (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ